This Question Paper contains 3 Printed Pages.

**01K(A)**

# KANNADA, Paper - I

*(First Language)*

**Parts A and B**

**Time : 2 hours 45 min.]** **[Maximum Marks : 40**

**ಸೂಚನೆಗಳು :**

1. **Part-A** ಪ್ರಶ್ನೆಗಳಿಗೆ ಪ್ರತ್ಯೇಕ ಉತ್ತರ ಪತ್ರಿಕೆಯಲ್ಲಿ ಉತ್ತರಿಸಿ.
2. **Part-B** ಪ್ರಶ್ನೆಗಳಿಗೆ ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯಲ್ಲಿಯೇ ಸೂಚಿತ ಸ್ಥಳಗಳಲ್ಲಿ ಉತ್ತರಿಸಿ ಅದನ್ನು **Part-A** ಉತ್ತರಪತ್ರಿಕೆಗೆ ಲಗತ್ತಿಸಿ. ಮೊದಲ **15** ನಿಮಿಷ ಪ್ರಶ್ನೆಪತ್ರಿಕೆ ಓದುವುದಕ್ಕೆ **2.30** ನಿಮಿಷಗಳು ಉತ್ತರಗಳನ್ನು ಬರೆಯುವುದಕ್ಕೆ ಒದಗಿಸಲಾಗಿದೆ.

## Part-A

***Time : 2 hours*** ***Marks : 30***

**I.** ಅವಗಾಹನೆ - ಪ್ರತಿಸ್ಪಂದನೆ (12 ಅಂಕಗಳು)

1. ಇವುಗಳಲ್ಲಿ **ಒಂದಕ್ಕೆ** ಪ್ರತಿಪದಾರ್ಥ ಬರೆಯಿರಿ : 1 × 4 = 4

ಅ) ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರದೊಳಿಬ್ಬರುದಿಸಿದರು

**(ಅಥವಾ)**

ಆ) ಕಾದದಿರೆನಜ್ಜ ಪಾಂಡವ
ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ ॥
ಣಾದೆನದಱಿಂದೆ ಪಾಂಡವ
ರ್ಗಾದುದು ಮೇಣಾಯ್ತು ಕೌರವಂಗವನಿತಳಂ ॥

2. ಇವುಗಳಲ್ಲಿ **ಒಂದನ್ನು** ಪಾದಭಂಗವಿಲ್ಲದಂತೆ ಪೂರ್ಣಗೊಳಿಸಿ ಭಾವಾರ್ಥ ಬರೆಯಿರಿ : 1 × 4 = 4

ಅ) ಸಿಕ್ಕದ್ದು .................... ಜನಕಾ.

ಆ) ಅಂತೆಂಬನಾರ್ಗೆ .............................. ನುಡಿದಂ.

3. ಈ ಗದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 4 ×1 = 4

ಒಬ್ಬ ಬ್ರಹ್ಮರ್ಷಿ ಋಷ್ಯಮೂಕ ಪರ್ವತದ ಬಳಿ ತಪಸ್ಸು ಮಾಡಿಕೊಂಡದ್ದ. ವಾಲಿಯು ದುಂದುಭಿಯೆಂಬ ರಕ್ಕಸನನ್ನು ಕೊಂದು ಮದೋನ್ಮತ್ತನಾಗಿ ಕಳೇಬರವನ್ನು ಆಶ್ರಮಕ್ಕೆ ಎಸೆದಾಗ ಋಷ್ಯಾಶ್ರಮವು ಕಲುಷಿತಗೊಂಡಿತು. ಇದರಿಂದ ಕುಪಿತನಾದ ಮತಂಗ ಮುನಿ ವಾಲಿಯು ಈ ಆಶ್ರಮವನ್ನು ಪ್ರವೇಶ ಮಾಡಿದರೆ ಸಾವು ಸಂಭವಿಸಿಲಿ ಎಂದು ಶಪಿಸಿದ. ವಾಲಿಯಿಂದ ಭಯಗ್ರಸ್ಥನಾದ ಸುಗ್ರೀವ ಇಲ್ಲಿ ನೆಲೆಸಿದ್ದನು. ಶಬರಿಯು ಮತಂಗರ ಆಶ್ರಮದಲ್ಲಿದ್ದಳು.

**ಪ್ರಶ್ನೆಗಳು :**

ಅ) ಋಷ್ಯಾಶ್ರಮವು ಕಲುಷಿತಗೊಳ್ಳಲು ಕಾರಣವೇನು ?

ಆ) ಮತಂಗರ ಆಶ್ರಮದಲ್ಲಿದ್ದ ತಪಸ್ವಿನಿ ಯಾರು ?

ಇ) ಮತಂಗರು ವಾಲಿಗೆ ಏನೆಂದು ಶಪಿಸಿದರು ?

ಈ) ವಾಲಿಯಿಂದ ಭಯಗ್ರಸ್ಥರಾದವರು ಯಾರು ?

**II.** ವ್ಯಕ್ತೀಕರಣ – ಸೃಜನಾತ್ಮಕತೆ (18 ಅಂಕಗಳು)

ಅ) ಈ ಕೆಳಗಿನ ಪ್ರಶ್ನೆಗಳಿಗೆ 4–5 ವಾಕ್ಯಗಳಲ್ಲಿ ಉತ್ತರಿಸಿ : 4 × 2 = 8

4. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ?

5. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

6. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

7. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

$2 \times 5 = 10$

ಆ) ಈ ಕೆಳಗಿನ ಪ್ರಶ್ನೆಗಳಿಗೆ 10–12 ವಾಕ್ಯಗಳಲ್ಲಿ ಉತ್ತರಿಸಿ :

8. ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೆ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

9. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ ?

**ಅಥವಾ**

ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?

---

**01K(B)**

# KANNADA, Paper - I

*(First Language)*

**Parts A and B**

**Time : 2 hrs. 45 min.]** **[Maximum Marks : 40**

**ಸೂಚನೆ :** ಈ ವಿಭಾಗದ ಪ್ರಶ್ನೆಗಳಿಗೆ ಈ ಪ್ರಶ್ನಪತ್ರಿಕೆಯಲ್ಲಿಯೇ ಸೂಚಿತ ಸ್ಥಳಗಳಲ್ಲಿ ಉತ್ತರಿಸಿ ಇದನ್ನು **Part-A** ಉತ್ತರಪತ್ರಿಕೆಗೆ ಲಗತ್ತಿಸಿ.

## Part-B

***Time : 30 minutes*** ***Marks : 10***

**ಭಾಷಾಂಶಗಳು (10 ಅಂಕಗಳು)**

**III.** ಪ್ರತಿಯೊಂದು ಪ್ರಶ್ನೆಗೆ ಕೊಟ್ಟಿರುವ ನಾಲ್ಕು ನಾಲ್ಕು ಉತ್ತರಗಳ ಪೈಕಿ ಸರಿಯಾದುದನ್ನು ಸೂಚಿಸುವ ಕ್ರಮಾಕ್ಷರವನ್ನು ಆಯಾ ಪ್ರಶ್ನೆಯ ಮುಂದಿನ ಆವರಣದಲ್ಲಿ ಬರೆಯಿರಿ : **$20 \times \frac{1}{2} = 10$**

**10.** ಮೃತ್ಪಾತ್ರ ಎಂಬುದರ ಅರ್ಥ : [ ]

(A) ಚಿನ್ನದ ಪಾತ್ರೆ (B) ಬೆಳ್ಳಿಯ ಪಾತ್ರೆ

(C) ಮಣ್ಣಿನ ಪಾತ್ರೆ (D) ಕಬ್ಬಿಣ ಪಾತ್ರೆ

**11.** ರೋದನ ಎಂಬುದರ ಅರ್ಥ : [ ]

(A) ಅಳುವಿಕೆ (B) ನಗುವುದು

(C) ಹಾಡುವುದು (D) ಕುಣಿಯುವುದು

**12.** ಹಯ ಎಂಬುದರ ಸಮಾನಾರ್ಥಕ ಪದ : [ ]

(A) ಹಸು, ಆಕಳು (B) ಕುದುರೆ, ಅಶ್ವ

(C) ಹಾವು, ಉರಗ (D) ಎತ್ತು , ಕೋಣ

13. ತನೂಜ ಇದರ ಸಮಾನಾರ್ಥಕ ಪದ :

(A) ಮಗ, ಕುಮಾರ

(B) ಮನುಜ, ದಿಗ್ಗಜ

(C) ಶೂರ, ತನ್ಮಯ

(D) ಕಣಜ, ಜಲಜ

[ ]

14. ಕಾಡು ಎಂಬುದರ ನಾನಾರ್ಥಗಳು :

(A) ಗೀಡು, ಕಡಿಯುವುದು

(B) ಅರಣ್ಯ, ದಂಡೆ

(C) ಹೊಲ, ತೋಟ

(D) ಅರಣ್ಯ, ಪೀಡಿಸು

[ ]

15. ಕಂದ ಎಂಬುದರ ನಾನಾರ್ಥಗಳು :

(A) ಮಗು, ಛಂದೋರೂಪ

(B) ಕವಿ, ವಿದ್ವಾಂಸ

(C) ಸಂಕೇತ, ಆವರಿಸು

(D) ಮಗು, ಮುದುಕ

[ ]

16. ಭೂಮಿಯ ಮಗಳು ಇದರ ವ್ಯುತ್ಪತ್ತಿ ಅರ್ಥ :

(A) ಕೌಶಲ್ಯೆ

(B) ಸೀತೆ

(C) ಶಬರಿ

(D) ಕುಂತಿ

[ ]

17. ಅಬ್ಧಿಪ ಇದರ ವ್ಯುತ್ಪತ್ತಿ ಅರ್ಥ :

(A) ಭೂಮಿಯ ಒಡೆಯ

(B) ಅಗ್ನಿಯ ಒಡೆಯ

(C) ಸಮುದ್ರದ ಒಡೆಯ

(D) ಆಕಾಶರಾಜ

[ ]

18. ಕಾರ್ಯ ಎಂಬುದರ ತದ್ಭವರೂಪ :

(A) ವೃತ್ತಿ

(B) ಕಜ್ಜ

(C) ಕಸುಬು

(D) ಕೆಲಸ

[ ]

19. ಬೇಹಾರಿ ಎಂಬುದರ ತತ್ಸಮ : [ ]

(A) ವ್ಯವಹಾರ
(B) ಬಾಯಾರಿ
(C) ವಿರೋಧ್ಗಾರಿ
(D) ವ್ಯಾಪಾರಿ

20. ದೇವೇಂದ್ರ ಎನ್ನುವಲ್ಲಿ ಆಗಿರುವ ಸಂಧಿ : [ ]

(A) ಸವರ್ಣದೀರ್ಘ
(B) ಗುಣ
(C) ವೃದ್ಧಿ
(D) ಯಣ್

21. ಮರವನ್ನು ಎಂಬುದರ ಸಂಧಿ ಬಿಡಿಸಿದರೆ : [ ]

(A) ಮರ + ವನ್ನು
(B) ಮರವು + ಅನ್ನು
(C) ಮರ + ಅನ್ನು
(D) ಮರ + ಯನ್ನು

22. ಸಾಕ್ಷಿಮಾಡಿ ಎನ್ನುವಲ್ಲಿ ಆಗಿರುವ ಸಮಾಸ : [ ]

(A) ಕ್ರಿಯಾ ಸಮಾಸ
(B) ದ್ವಿಗು
(C) ಗಮಕ
(D) ಅಂಶಿ

23. ಹೊಸಗನ್ನಡ ಎನ್ನುವುದರ ವಿಗ್ರಹವಾಕ್ಯ : [ ]

(A) ಹೊಸ + ಗನ್ನಡ
(B) ಹೊಸದು + ಕನ್ನಡ
(C) ಹೊಸ + ಅನ್ನಡ
(D) ಹೊಸತು + ಗನ್ನಡ

24. ಖ್ಯಾತ ಕರ್ಣಾಟಕ ವೃತ್ತಗಳ ಸಂಖ್ಯೆ : [ ]

(A) ನಾಲ್ಕು
(B) ಐದು
(C) ಆರು
(D) ಎಂಟು

25. ಮಾತ್ರಾಗಣ ಛಂದಸ್ಸಿನಲ್ಲಿ ಬಹುಪಾದಗಳುಳ್ಳ ಪದ್ಯ : [ ]

(A) ಕಂದ (B) ಷಟ್ಪದಿ

(C) ವೃತ್ತ (D) ರಗಳೆ

26. ದೇವರು ಇಲ್ಲಿರುವ ಗಣ : [ ]

(A) ಭಗಣ (B) ಮಗಣ

(C) ಯಗಣ (D) ನಗಣ

27. "ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ"

– ಈ ಅಲಂಕಾರ : [ ]

(A) ಉಪಮಾಲಂಕಾರ (B) ರೂಪಕಾಲಂಕಾರ

(C) ಉತ್ಪ್ರೇಕ್ಷಾಲಂಕಾರ (D) ಯಮಕ

28. "ಮಾತು ಬಲ್ಲವನಿಗೆ ಜಗಳವಿಲ್ಲ ; ಊಟಬಲ್ಲವನಿಗೆ ರೋಗವಿಲ್ಲ" – ಅಲಂಕಾರ ಗುರುತಿಸಿ : [ ]

(A) ಉಪಮಾ (B) ರೂಪಕ

(C) ದೃಷ್ಟಾಂತ (D) ಶ್ಲೇಷ

29. ಉಪಮಾಲಂಕಾರಕ್ಕೆ ಉದಾಹರಣೆ : [ ]

(A) ಅಳ್ಳಿರಿಯುತಿಪ್ಪ ಎಮ್ಮ ಒಡಲ ಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ

(B) 'ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರದಂತೆ'

(C) ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ ?

(D) ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.